**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಿದ ದಿನಾಂಕ : 28.11.2025**

**ಮಧ್ಯಂತರ ಅರ್ಜಿಯ ಆದೇಶದ ಮೇರೆಗೆ ಸಾಕ್ಷಿಯನ್ನು ಪುನಃ ಕರೆಯಿಸಿ ಪಾಟೀ ಸವಾಲು ಮಾಡಲು ಅನುಮತಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ 2 ಮತ್ತು 3 ರ ಪರ ವಕೀಲರಿಂದಃ**

1. ನಾನು ವಿದ್ಯಾಭ್ಯಾಸ ಮಾಡಿಲ್ಲ. ಹಣ ಕೇಳಿಕೊಂಡು ಪ್ರಥಮ ಬಾರಿಗೆ ಉಗ್ರೇಗೌಡ, ಪ್ರಸನ್ನ ಮತ್ತು ಅವರ ತಾಯಿ ನನ್ನ ಬಳಿ ಬಂದಿದ್ದರು. ಕರಾರು ಪತ್ರವಾಗುವ 3-4 ದಿನ ಮುಂಚೆ ಅವರುಗಳು ಬಂದು ಹಣ ಕೇಳಿದರು. ಕರಾರು ಪತ್ರವನ್ನು ವ್ಯಾಪಾರವಾದ ನಂತರ ಬರೆಸಿದೆವು. ವ್ಯಾಪಾರಕ್ಕೆ ಮೂರು ನಾಲ್ಕು ಸೇರಿದ್ದೆವು ರಾಮೇಗೌಡ ಮತ್ತು ವಸಂತ ಇದ್ದರು. ವ್ಯಾಪಾರವನ್ನು ನಮ್ಮ ಊರಿನಲ್ಲಿ ಮಾಡಿಕೊಂಡೆವು. ವ್ಯಾಪಾರವಾಗುವಾಗ ಪ್ರಸನ್ನ ಮತ್ತು ಪಲ್ಲವಿ ಇರಲಿಲ್ಲ ಎಂದರೆ ಸಾಕ್ಷಿ ಎಂದರೆ ಸರಿಯಲ್ಲ. ಸಾಕ್ಷಿ ಪಲ್ಲವಿ ಮಾತ್ರ ಇರಲಿಲ್ಲ ಎಂದು ಹೇಳುತ್ತಾರೆ. 3 ನೇ ಪ್ರತಿವಾದಿ ಊರಿನಲ್ಲಿ ವಾಸ ಇರಲಿಲ್ಲ ಎಂದರೆ ಸರಿಯಲ್ಲ. ವಕೀಲರಿಂದ ಕಳುಹಿಸಿದ್ದ ನೋಟೀಸ್ 3 ನೇ ಪ್ರತಿವಾದಿಗೆ ಜಾರಿಯಾಗಿಲ್ಲ ಎಂದರೆ ಸರಿಯಲ್ಲ. ನೀವು ಪತ್ರಿಕಾ ಪ್ರಕಟಣೆ ತೆಗೆದುಕೊಂಡ ನಂತರ ಈ ದಾವೆ ವಿಚಾರ 3 ನೇ ಪ್ರತಿವಾದಿಗೆ ತಿಳಿದಿದೆ ಎಂದರೆ ಸಾಕ್ಷಿ 3 ನೇ ಪ್ರವಾದಿ ಸಿಗದೆ ಇದ್ದರಿಂದ ಪತ್ರಿಕಾ ಪ್ರಕಟಣೆ ತೆಗೆದುಕೊಂಡೆವು ಎಂದು ಹೇಳುತ್ತಾರೆ.

2. ಕರಾರು ಪತ್ರವಾದ ಎರಡು ವರ್ಷದ ನಂತರ ಲೀಲಾವತಮ್ಮ ಮೃತರಾದರು. ಲೀಲಾವತಮ್ಮ ಮೃತರಾದ ನಂತರ ಉಗ್ರೇಗೌಡ ಊರು ಬಿಟ್ಟಿದ್ದರು ಎಂದರೆ ಸರಿ. ಸಾಕ್ಷಿ ಸ್ವತಃ ಮಗನಿಗೆ ಹೆದರಿ ಊರು ಬಿಟ್ಟು ಹೋದರು ಎಂದು ಹೇಳುತ್ತಾರೆ. ನೀವು ಈ ದಾವೆಯನ್ನು ಹಾಕಿರುವುದು ಉಗ್ರೇಗೌಡ ಊರು ಬಿಟ್ಟ ನಂತರ ಎಂದರೆ ಸರಿ. ಉಗ್ರೇಗೌಡ ಊರಿನಲ್ಲಿ ಇರುವ ತನಕ ಪ್ರತಿತಿಂಗಳು ರೂ.10 ಸಾವಿರ ಬಡ್ಡಿ ಕೊಡುತ್ತಿದ್ದರು ಎಂದರೆ ಸರಿಯಲ್ಲ. ಸಾಕ್ಷಿ ಯಾವತ್ತು ಕೊಟ್ಟಿಲ್ಲವೆಂದು ಹೇಳುತ್ತಾರೆ. ಹಣಕಾಸಿನ ವ್ಯವಹಾರ ನಿಮ್ಮ ಮತ್ತು ಉಗ್ರೇಗೌಡರವರ ನಡುವೆ ನಡೆದಿರುತ್ತದೆ ಎಂದರೆ ಸರಿಯಲ್ಲ. ಈ ಹಣಕಾಸಿನ ವಿಚಾರ 2 ಮತ್ತು 3 ನೇ ಪ್ರತಿವಾದಿಗಳಿಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ಹಣ ಕೊಟ್ಟ ನಂತರ ನಿಪಿ.1 ನ್ನು ಮಾಡಿಸಿಕೊಂಡಿರುತ್ತೀರಾ ಎಂದರೆ ಸರಿ ಸಾಕ್ಷಿ ಹಣ ಕೊಟ್ಟಿರುವುದರಿಂದ ಮಾಡಿಸಿಕೊಂಡೆ ಎಂದು ಹೇಳುತ್ತಾರೆ. ಉಗ್ರೇಗೌಡ ಊರು ಬಿಟ್ಟ ನಂತರ ಹಾಗೂ ಬಡ್ಡಿ ಹಣ ಪಾವತಿ ಮಾಡದೇ ಇದುದ್ದರಿಂದ ಈ ದಾವೆ ಸಲ್ಲಿಸಿರುತ್ತೀರಾ ಎಂದರೆ ಸಾಕ್ಷಿ ಮೂರು ವರ್ಷ ಆಗಿರಲಿಲ್ಲ, ಅದ್ದರಿಂದ ದಾವೆ ಸಲ್ಲಿಸಿರಲಿಲ್ಲ ಎಂದು ಹೇಳುತ್ತಾರೆ ಹಾಗೂ ಮೂರು ವರ್ಷಕ್ಕೆ 4 –5 ದಿನ ಬಾಕಿ ಇರುವಾಗ ಉಗ್ರೇಗೌಡರು ಮೃತರಾದರು ಎಂದು ಹೇಳುತ್ತಾರೆ.

3. ನಾನು ವ್ಯವಸಾಯ ಮಾಡಿಕೊಂಡು ಬರುತ್ತಿದ್ದೇನೆ. ನಮ್ಮ ಕುಟುಂಬದಲ್ಲಿ ಒಟ್ಟು ಐದು ಜನ ವಾಸವಿದ್ದೇವೆ. ನನಗೆ 3–4 ಎಕರೆ ಆಸ್ತಿ ಇದೆ. ವರ್ಷಕ್ಕೆ ಎಷ್ಟು ಆದಾಯ ಬರುತ್ತದೆ

ಎಂದರೆ ಸಾಕ್ಷಿ ಬೆಳೆಗಳಿಂದ ಸುಮಾರು ರೂ.25 ಸಾವಿರ ಹಾಗೂ ಹಾಲಿನಿಂದ ಸ್ವಲ್ಪ ಹಣ ಬರುತ್ತದೆ ಎಂದು ಹೇಳುತ್ತಾರೆ. ವರ್ಷಕ್ಕೆ ನೀವು ರೂ.25 ಸಾವಿರ ಸಂಪಾದನೆ ಮಾಡುತ್ತೀರಾ ಎಂದರೆ ಸರಿ, ಸಾಕ್ಷಿ ಹೂವು ಮತ್ತು ಹಾಲಿನಿಂದ ಸಂಪಾದನೆ ಮಾಡುತ್ತೇವೆಂದು ಹೇಳುತ್ತಾರೆ. ಈ ಆದಾಯದಿಂದ ನೀವು ಕುಟುಂಬದ ನಿರ್ವಹಣೆ ಮಾಡುತ್ತೀರಾ ಎಂದರೆ ಸರಿ. ನಿಮ್ಮ ವರ್ಷಿಕ  ಆದಾಯದಲ್ಲಿ ಕುಟುಂಬದ ನಿರ್ವಹಣೆ ಖರ್ಚು ಕಳೆದು ವರ್ಷಕ್ಕೆ ಸುಮಾರು ರೂ.20 ಸಾವಿರ ಉಳಿದಿದೆ ಎಂದರೆ ಸರಿ, ಸಾಕ್ಷಿ ಬೇರೆ ಬೇರೆ ವ್ಯವಹಾರ ಮಾಡುತ್ತೇವೆಂದು ಹೇಳುತ್ತಾರೆ. ಪ್ರತಿವಾದಿಗಳಿಗೆ  ಕೊಟ್ಟಿದ್ದೇನೆಂದು ಹೇಳಲಾಗುವ ಹಣ ಬೇರೆಯುವರಿಂದ ಪಡೆದು ಕೊಟ್ಟಿರುತ್ತೇನೆ.  ರೂ.5 ಲಕ್ಷ ಸಾಲ ಕೊಡಲು ನಿಮಗೆ ಆರ್ಥಿಕ ಚೈತನ್ಯ ಇಲ್ಲ ಎಂದರೆ ಸರಿಯಲ್ಲ.

4. ದಿಃ 06.11.2020 ರಂದು ಪಾಂಡವಪುರಕ್ಕೆ  ನಾನು ಮತ್ತು ಇಬ್ಬರು ಸಾಕ್ಷೀದಾರರು ಸುಮಾರು 11 ಗಂಟೆಗೆ ಬಂದೆವು. ನಿಪಿ.1ರ ಸಾಕ್ಷೀದಾರರು ನಿಮಗೆ ಸಂಬಂಧಿಗಳು ಎಂದರೆ ಸಾಕ್ಷಿ ಒಬ್ಬರು ಸಂಬಂಧಿ ಮತ್ತೊಬ್ಬರು ಸಂಬಂಧಿಯಲ್ಲ ಎಂದು ಹೇಳುತ್ತಾರೆ. ಇನ್ನೊಬ್ಬ ಸಾಕ್ಷೀದಾರ  ನಿಮಗೆ ವಿಶ್ವಾಸಿ ಎಂದರೆ ಸರಿ. ಸಾಕ್ಷೀದಾರರನ್ನು ನೀವೇ ಕರೆಸಿ ನಿಮಗೆ ಅನುಕೂಲವಾಗುವಂತಹ ಪತ್ರಕ್ಕೆ ಸಹಿ ಪಡೆದುಕೊಂಡಿರುತ್ತೀರಾ ಎಂದರೆ ಸರಿಯಲ್ಲ. 2020 ರಲ್ಲಿ  ಡಿಂಕಾಶೆಟ್ಟಿಹಳ್ಳಿ ಗ್ರಾಮದ ಒಂದು ಗುಂಟೆ ಜಮೀನನ್ನು ರೂ.8 ಸಾವಿರ ರೂಪಾಯಿಗಳಿಗೆ ಮಾತುಕತೆ ಮಾಡಿ ತೆಗೆದುಕೊಂಡೆನು.  2020 ರಲ್ಲಿ ದಾವಾ

ಷೆಡ್ಯೂಲ್ ಸ್ವತ್ತಿನ ಒಂದು ಗುಂಟೆ ರೂ.8 ಸಾವಿರಕ್ಕಿಂತ ಹೆಚ್ಚಿತ್ತು ಎಂದರೆ ಸರಿಯಲ್ಲ. ನಿಪಿ.1 ರಲ್ಲಿ ಗುಂಟೆ ರೂ.8 ಸಾವಿರ ಎಂದು ಬರೆಸಿಲ್ಲ. ನೀವು ಹೇಳುವಂತೆ ಯಾವುದೇ ಕ್ರಯದ ಮಾತುಕತೆ ನಡೆದಿಲ್ಲ ಎಂದರೆ ಸರಿಯಲ್ಲ. ಯಾವುದೇ ಕರಾರು ವ್ಯವಹಾರಗಳಲ್ಲಿ ಶೇಕಡ 90 ರಷ್ಟು ಹಣ ಕೊಟ್ಟರೆ ಕೂಡಲೇ ಜಮೀನಿನ ಸ್ವಾಧೀನ ಪಡೆದುಕೊಳ್ಳುತ್ತಾರೆ ಎಂದರೆ ಸಾಕ್ಷಿ ಹೌದು ಎಂದು ಹೇಳುತ್ತಾರೆ. ಅದೇ ದಿನ ಶುದ್ಧ ಕ್ರಯಪತ್ರ ಬರೆಸಿಕೊಳ್ಳಲು ತೊಂದರೆ ಇತ್ತಾ ಎಂದರೆ ಸಾಕ್ಷಿ ಸ್ವಲ್ಪ ಹಣ ಕಡಿಮೆ ಇದುದ್ದರಿಂದ ಮಾಡಿಸಿಕೊಳ್ಳಲಿಲ್ಲ ಎಂದು ಹೇಳುತ್ತಾರೆ.

5. ನೋಟೀಸು ಕಳುಹಿಸುವ ಪೂರ್ವದಲ್ಲಿ ಪ್ರತಿವಾದಿಗಳನ್ನು ಖುದ್ದು ಭೇಟಿ ಮಾಡಿರುತ್ತೀರಾ ಎಂದರೆ ಸಾಕ್ಷಿ, ಅವರುಗಳು ಊರಿನಲ್ಲಿ ಇರಲಿಲ್ಲ ಮತ್ತು ಉಗ್ರೇಗೌಡ ಹಾಗೂ ಲೀಲಾವತಮ್ಮ ಸತ್ತು ಹೋಗಿದ್ದರು ಎಂದು ಹೇಳುತ್ತಾರೆ. ಕ್ರಯಪತ್ರ ನೋಂದಣಿ ಮಾಡಿಸಿಕೊಳ್ಳಲು ಪ್ರತಿವಾದಿಗಳನ್ನು ಕರೆಯುವ ಪ್ರಮೇಯ ಉದ್ಭವವಾಗಿರಲಿಲ್ಲ ಎಂದರೆ ಸರಿಯಲ್ಲ. ಪತ್ರವಾದ ಮೂರು ವರ್ಷದ ಒಳಗಾಗಿ ಪ್ರತಿವಾದಿಗಳನ್ನು ಭೇಟಿ ಮಾಡಿ ಕ್ರಯಪತ್ರ ಮಾಡಿಕೊಡಿ ಎಂದು ಕೇಳಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗಳ ಆಸ್ತಿ ಹೊಡೆದುಕೊಳ್ಳಲು ಈ ದಾವೆ ಹಾಕಿರುತ್ತೀರಾ ಎಂದರೆ ಸರಿಯಲ್ಲ. ನಿಪಿ.1 ರಲ್ಲಿ ಹೇಳಿರುವ ಹಣ ಮತ್ತು ಬಡ್ಡಿ ಸೇರಿಸಿ ಕೊಡಲು 3 ನೇ ಪ್ರತಿವಾದಿ ಸಿದ್ಧರಿರುತ್ತಾರೆ ಎಂದರೆ ಸಾಕ್ಷಿ ನಾನು ಹಣ ಕೊಟ್ಟಿರುವುದು ಜಮೀನಿಗಾಗಿ ಎಂದು ಹೇಳುತ್ತಾರೆ. ದಾವೆ ಹಾಕಿದ

*ನಂತರ 3 ನೇ ಪ್ರತಿವಾದಿಯಿಂದ ರಾಜೀ ಮಾಡುವುದಾಗಿ ಹೇಳಿ ರೂ.2 ಲಕ್ಷ ಹಣವನ್ನು ಕೆ ಎಂ ನಾಗೇಗೌಡ, ನಂಜೇಗೌಡ ಮತ್ತು ಗಂಗಾಧರರವರ ಸಮಕ್ಷಮ ಪಡೆದುಕೊಂಡಿರುತ್ತೀರಾ ಎಂದರೆ ಸರಿಯಲ್ಲ. ನೀವು ಪಂಚಾಯತಿದಾರರ ಸಮಕ್ಷಮ ರೂ.2 ಲಕ್ಷ ಹಣ ಪಡೆದುಕೊಂಡಿದ್ದರು ನೀಡಿಲ್ಲ ಎಂದು ಸುಳ್ಳು ಹೇಳುತ್ತಿದ್ದೀರಾ ಎಂದರೆ ಸರಿಯಲ್ಲ.*

***ಮರು ವಿಚಾರಣೆ ಇಲ್ಲ.***

***ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚುಗೊಳಿಸಲಾಯಿತು.***

***ಓ ಹೇ ಕೇ ಸ ಇ ಒ***

***ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು***
***ಮತ್ತು ಜೆ.ಎಂ.ಎಫ್.ಸಿ., ಪಾಂಡವಪುರ.***